## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ರಾಜೊಳ್ಳಿ ಗ್ರಾಮಕ್ಕೆ ಕುಡಿಯುವ ನೀರಿನ ಕಾಮಗಾರಿಯಲ್ಲಿ ಸ್ಟಾಂಡ್ ಪೋಸ್ಟ್‌ಗಳ ನಿರ್ಮಾಣದಲ್ಲಿ ಅವ್ಯವಹಾರ- ಇಲಾಖಾ ವಿಚಾರಣೆ- ದಂಡನೆ ವಿಧಿಸುವ ಬಗ್ಗೆ ಆದೇಶ.

*ಓದಲಾಗಿದೆ:*

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಇಎನ್‌ಕ್ಯೂ 2014, ದಿನಾಂಕ:13.10.2014.
2. ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಸಂಖ್ಯೆ: ಲೋಕ್/ಐಎನ್‌ಕ್ಯೂ/14-ಎ/539/2014/ಎಆರ್‌ಇ-1, ದಿ:18.8.2016 ಮತ್ತು 03.8.2016.
3. 2 ನೇ ಕಾರಣ ಕೇಳುವ ನೋಟಿಸ್ ಸಂಖ್ಯೆ: ಗ್ರಾಅಪ 85 ಇಎನ್‌ಕ್ಯೂ 2016, ದಿನಾಂಕ:30.8.2016.
4. ಆರೋಪಿತರ ವಿವರಣೆ ದಿನಾಂಕ:
   1. ಕೆ.ಶಂಕರ್-14.9.2016.
   2. ಶೇಖ ಜಹೀರಿದ್ದೀನ್-15.9.2016.
   3. ಜಿ.ಎನ್.ಪ್ರಕಾಶ್ - ದಿ:15.9.2016.

*****

*ಪ್ರಸ್ತಾವನೆ:-*

ಶ್ರೀ ನರಸಿಂಹ ತಂದೆ ರಾಮಣ್ಣ, ರಾಜೊಳ್ಳಿ ಗ್ರಾಮ, ಮಾನ್ವಿ ತಾಲ್ಲೂಕು ಇವರು ಸಲ್ಲಿಸಿದ್ದ ದೂರಿಗೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರು ಲೋಕಾಯುಕ್ತ ಕಾಯ್ದೆ ಕಲಂ-9 ರ ಅನುಸಾರ ತನಿಖೆ ಕೈಗೊಂಡು ಸರ್ಕಾರಕ್ಕೆ ಸಲ್ಲಿಸಿದ್ದ ಕಲಂ 12(3) ರ ವರದಿಯಲ್ಲಿ ಮಾನ್ವಿ ತಾಲ್ಲೂಕು ರಾಜೊಳ್ಳಿ ಗ್ರಾಮದಲ್ಲಿ 2008-09 ನೇ ಸಾಲಿನಲ್ಲಿ ಕುಡಿಯುವ ನೀರಿನ ಕಾಮಗಾರಿಯಲ್ಲಿ ಎಸಗಿರುವ ಕರ್ತವ್ಯ ಲೋಪ ಹಾಗೂ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಕುರಿತು ಶಿಫಾರಸ್ಸು ಮಾಡಿದ್ದನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 11 ರಂತೆ ಇಲಾಖಾ ವಿಚಾರಣೆ ನಡೆಸಲು, ನಿಯಮ 14-ಎ ರ ಅನುಸಾರ ಪ್ರಕರಣವನ್ನು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:13.10.2014ರ ಆದೇಶದಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿತ್ತು:-

1. **ಶ್ರೀ ಜಹೀರುದ್ದೀನ್, ಹಿಂದಿನ ಕಿರಿಯ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಉಪವಿಭಾಗ, ಮಾನ್ವಿ**
2. **ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಉಪವಿಭಾಗ, ಮಾನ್ವಿ**
3. **ಶ್ರೀ ಕೆ. ಶಂಕರ್, ಪ್ರಭಾರ ಕಾರ್ಯಪಾಲಕ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ರಾಯಚೂರು**

ದಿನಾಂಕ:13.10.2014 ರ. ಸರ್ಕಾರದ ಆದೇಶವನ್ನು ಅನುಸರಿಸಿ, ಮಾನ್ಯ ಉಪಲೋಕಾಯುಕ್ತರು ಮೇಲ್ಕಂಡ ಆರೋಪಿತರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಗಳು ಶಿಸ್ತುಪ್ರಾಧಿಕಾರದ ಪರ 2 ಸಾಕ್ಷಿಗಳು ಹಾಗೂ 10 ದಾಖಲೆಗಳನ್ನು ಮತ್ತು ಆರೋಪಿತರ ಪರ 5 ಸಾಕ್ಷಿಗಳು ಹಾಗೂ 2 ದಾಖಲೆಗಳನ್ನು ಆರೋಪಗಳ ಕುರಿತು ಪರಿಶೀಲಿಸಿ ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗುತ್ತದೆ ಎಂಬ ನಿರ್ಣಯದೊಂದಿಗೆ ಮಾನ್ಯ ಉಪಲೋಕಾಯುಕ್ತರಿಗೆ ವರದಿ ಸಲ್ಲಿಸಿದ್ದರು. ಮಾನ್ಯ ಉಪಲೋಕಾಯುಕ್ತ-1 ರವರು ವಿಚಾರಣಾಧಿಕಾರಿಗಳ ನಿರ್ಣಯಕ್ಕೆ ಸಹಮತಿಸಿ ಆರೋಪಿತರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ. 60,264/- ಗಳನ್ನು ಮೂವರು ಆರೋಪಿತರಿಂದ ಸಮ ಪ್ರಮಾಣದಲ್ಲಿ ವಸೂಲಿ ಮಾಡಲು ಸಾಬೀತಾದ ಆರೋಪಕ್ಕನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಿದ್ದರು.

ವಿಚಾರಣಾ ವರದಿಯನ್ನು ಅನುಸರಿಸಿ ಕ್ರಮ ವಹಿಸುವ ಮೊದಲು ಅಪಾದಿತರಿಗೆ ವಿಚಾರಣಾ ವರದಿಯ ಪ್ರತಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಗಳನ್ನು ಮೂವರು ಅಪಾದಿತರಿಗೆ ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:30.8.2016ರ ಎರಡನೇ ಕಾರಣ ಕೇಳುವ ನೋಟೀಸ್‌ನೊಂದಿಗೆ ಜಾರಿ ಮಾಡಲಾಗಿತ್ತು. ಪ್ರತಿಯಾಗಿ ಆಪಾದಿತರುಗಳು ಮೇಲೆ ಓದಲಾದ ಕ್ರಮಾಂಕ (4) ರಂತೆ ಕೆಲವೊಂದು ದಾಖಲೆಗಳೊಂದಿಗೆ ವಿವರಣೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ, ದೋಷಮುಕ್ತಗೊಳಿಸಬೇಕೆಂದು ಕೋರಿದ್ದರು.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ಸಂಬಂಧಿಸಿದ ದಾಖಲೆಗಳು, ಸಾಕ್ಷಿಗಳ ಹೇಳಿಕೆಗಳು, ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆ ಮತ್ತು ಪೂರಕ ದಾಖಲೆಗಳನ್ನು ಪರಿಗಣಿಸಲಾಗಿದೆ. ಪ್ರಕರಣದಲ್ಲಿ ಬಾಗಿಯಾಗಿರುವ ಆಪಾದಿತರುಗಳ ವಿರುದ್ಧದ ಆರೋಪಗಳು ಎಂದರೆ, ಮಾನ್ವಿ ತಾಲ್ಲೂಕು ರಾಜೋಳ್ಳಿ ಗ್ರಾಮದಲ್ಲಿ ಮಂಜೂರಾದ ಅಂದಾಜಿನಂತೆ ನಿರ್ಮಿಸಬೇಕಾಗಿದ್ದ 5 ಸ್ಟಾಂಡ್ ಪೋಸ್ಟ್‌ಗಳಿಗೆ ಬದಲಿಗೆ ಒಂದು ಸ್ಟಾಂಡ್‌ಪೋಸ್ಟ್‌ನ್ನು ಮಾತ್ರ ನಿರ್ಮಿಸಲಾಗಿದ್ದು ಉಳಿದ ನಾಲ್ಕು ಸ್ಟಾಂಡ್ ಪೋಸ್ಟ್‌ಗಳನ್ನು ನಿರ್ಮಿಸದೇ ಇದ್ದರೂ ರೂ. 60,264/- ಗಳನ್ನು ಪಾವತಿಸಿ, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದಲ್ಲದೇ ನಿರ್ಮಿಸಿರುವ ಒಂದು ಸ್ಟಾಂಡ್ ಪೋಸ್ಟ್ ಸಹ ನಿರುಪಯುಕ್ತವಾಗಿರುವ ಬಗ್ಗೆ ಆಪಾದಿಸಲಾಗಿದೆ.

ಸದರಿ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ 2 ಸಾಕ್ಷಿಗಳು ಹಾಗೂ 10 ದಾಖಲೆಗಳನ್ನು, ಅಪಾದಿತರ ಪರವಾಗಿ 5 ಸಾಕ್ಷಿಗಳನ್ನು ಇಲಾಖಾ ವಿಚಾರಣೆ ಸಂದರ್ಭದಲ್ಲಿ ಪರಿಗಣಿಸಿರುತ್ತಾರೆ. ಮಂಜೂರಾದ ಅಂದಾಜಿನ ಅನುಸಾರ ರಾಜೋಳ್ಳಿ ಗ್ರಾಮದಲ್ಲಿ ರೂ. 12.00 ಲಕ್ಷಗಳ ವೆಚ್ಚದಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು ಎರಡು ಕೊಳವೆ ಬಾವಿಗಳನ್ನು ಕೊರೆಯುವುದು, ಒಂದು ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಿ, ಗ್ರಾಮಸ್ಥರಿಗೆ 5 ಸ್ಟಾಂಡ್ ಪೋಸ್ಟ್‌ಗಳ ಮೂಲಕ ನೀರು ಸರಬರಾಜು ಮಾಡಬೇಕಾಗಿರುತ್ತದೆ. ಕಾಮಗಾರಿ ಅನುಷ್ಠಾನಗೊಳಿಸಿದ ಅಧಿಕಾರಿಗಳು ಎರಡು ಕೊಳವೆ ಬಾವಿಗಳನ್ನು ಕೊರೆಯುವ ಬದಲು ತುಂಗಭದ್ರಾ ನದಿಯಿಂದ ನೀರನ್ನು ಪಡೆಯುವ ರೀತಿ ಅಂದಾಜನ್ನು ಮಾರ್ಪಡಿಸಿ, ತುಂಗಾಭದ್ರ ನದಿಯಿಂದ ನೀರನ್ನು ಪಡೆದು ಗ್ರಾಮಕ್ಕೆ ನೀರು ಸರಬರಾಜು ಮಾಡುತ್ತಿರುವುದು, ಗ್ರಾಮದಲ್ಲಿ 5 ಸ್ಟಾಂಡ್ ಪೋಸ್ಟ್‌ಗಳನ್ನು ನಿರ್ಮಿಸಿರುವ ಬಗ್ಗೆ ದಾಖಲೆಗಳಲ್ಲಿ ತೋರಿಸಿದ್ದರು, ತನಿಖಾ ಸಂದರ್ಭದಲ್ಲಿ ಒಂದು ಸ್ಟಾಂಡ್‌ಪೋಸ್ಟ್ ಮಾತ್ರ ಕಂಡು ಬಂದಿದ್ದು ಅದು ಕೂಡ ನಿರುಪಯುಕ್ತವಾಗಿರುವ

ಅಂಶಗಳನ್ನು ವಿಚಾರಣಾಧಿಕಾರಿಯವರು ಪರಿಗಣಿಸಿ, ಆರೋಪಿತರ ವಿರುದ್ಧದ ಆರೋಪಗಳು ಸಾಭಿತಾಗಿರುತ್ತವೆಯೆಂದು ನಿರ್ಣಯಿಸಿರುತ್ತಾರೆ.

ಶ್ರೀ ಕೆ.ಶಂಕರ್, ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್ ಇವರು 2 ನೇ ಕಾರಣ ಕೇಳುವ ನೋಟೀಸ್‌ಗೆ ಪ್ರತಿಯಾಗಿ ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ಮಾನ್ವಿ ಪಂ.ರಾ.ಇಂ ಉಪವಿಭಾಗದಲ್ಲಿ ಸ.ಕಾ.ಇಲ್ಲಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವರ ಕಾರ್ಯಾವಧಿಯಲ್ಲಿ ಮಾನ್ವಿ ತಾಲ್ಲೂಕು ರಾಜೋಳ್ಳಿ ಗ್ರಾಮದಗೆ ಕೊಳವೆ ಬಾವಿ ನೀರು ಸರಬರಾಜು ಯೋಜನೆ ಮಂಜೂರಾಗಿರುತ್ತದೆಯೆಂದು, ಸದರಿ ಕಾಮಗಾರಿಳ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ಕಿರಿಯ ಇಂಜಿನಿಯರ್ ಆದ ಶ್ರೀ ಜಹೀರುದ್ದೀನ ಇವರು ತಯಾರಿಸಿದಕ್ಕೆ ನಿಯಮಾನುಸಾರ ಸದರಿ ಅಂದಾಜು ಪಟ್ಟಿಗೆ ಎಲ್ಲಾ ಹಂತಗಳಲ್ಲಿನ ಪರಿಶೀಲನೆಯ ನಂತರ ಸಕ್ಷಮ ಪ್ರಾಧಿಕಾರಲಿ ಅನುಮೋದನೆಯಾಗಿರುತ್ತದೆಯೆಂದು, ಅಂದಾಜು ಪಟ್ಟಿಯ ಅನುಮೋದನೆ ನಂತರ ಟೆಂಡರ್ ಕರೆದಿದ್ದು, ಸದ ಟೆಂಡರ್ ಶ್ರೀ ಹುಸೇನ್ ಪಾಶ ಇವರಿಗೆ ಹಂಚಿಕೆಯಾಗಿದ್ದು ದಿನಾಂಕ:17.6.2008 ರಂದು ಕಾರ್ಯಾದೇ ಹೊರಡಿಸಲಾಗಿದೆಯೆಂದು, ಈ ನಡುವೆ ತಮ್ಮನ್ನು ಮಾನ್ವಿ ಪಂ.ರಾ.ಇಂ ಉಪವಿಭಾಗದಿಂದ ರಾಯಚೂರತಿ ಪಂ.ರಾ.ಇಂ ಉಪವಿಭಾಗಕ್ಕೆ ವರ್ಗಾವಣೆ ಮಾಡಿದ್ದು ದಿನಾಂಕ: 18.8.2008 ರಂದು ತಾವು ಕರ್ತವ್ಯದಿಂದ ಬಿಡುಗಡೆಗೊಂಡಿರುವುದಾಗಿಯೂ ತಿಳಿಸಿ ಸಿ.ಟಿ.ಸಿ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಮುಂದುವರಿದು, ಕಾಮಗಾರಿಗೆ ಸಂಬಂಧಿಸಿದಂತೆ ಮೊದಲನೇ ಹಾಗೂ ಎರಡನೇ ಬಿಲ್‌ಗಳಿಗೆ ಹಿಂದಿ ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ ಬಾಲಾಜಿ ಸಿಂಗ್ ಮತ್ತು ಶ್ರೀ ವಾಲಿ ಇವರು ಪಾವತಿಸಿದ್ದು ಅಂತಿಮ ಬಿಲ್‌ಗೆ ಮಾತ್ರ ತಾವು ಪಾವತಿಸಿರುವುದಾಗಿಯೂ, ಇದರಿಂದ ಸದರಿ ಕಾಮಗಾರಿಯ ಪೂರ್ಣ ಉಸ್ತುವಾರಿಯು, ತಮ್ಮದಾಗಿರುವುದಿಲ್ಲವೆಂದು, ವಿಚಾರಣಾಧಿಕಾರಿಗಳು ಮಾರ್ಪಾಟು ಅಂದಾಜು ಪಟ್ಟಿಯನ್ನು ತಯಾರಿಸದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಮೂಲ ಅಂದಾಜು ಪಟ್ಟಿಯಲ್ಲಿರುವ ಮೊತ್ತವನ್ನು ಮೀರದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ಸಂಹಿತೆಯನುಸಾರ ಮಾರ್ಪಾಟು ಅಂದಾಜನ್ನು ಸಿದ್ಧಪಡಿಸುವ ಅಗತ್ಯವಿಲ್ಲವೆಂದಿಗೆ ತಿಳಿಸಿ, ಈ ಸಂಬಂಧ ಲೋಕೋಪಯೋಗಿ ಇಲಾಖೆಯ ಸಂಹಿತೆಯನ್ನು ಲಗತ್ತಿಸಿ, ಸಲ್ಲಿಸಿರುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ದಿನಾಂಕ:05.03.2010 ರಂದು ಕಾಮಗಾರಿಯನ್ನೇ ಹಸ್ತಾಂತರಿಸಿದ್ದು ನಂತರ ಕಾಮಗಾರಿಯ ಉಸ್ತುವಾರಿಯನ್ನು ನಿರ್ವಹಿಸುವ ಜವಬ್ದಾರಿಯು ಸಂಬಂಧಪಟ್ಟ ಗ್ರಾಮ ಪಂಚಾಯತ್ ಹೊಂದಿರುತ್ತದೆಯೆಂದು, ಹಸ್ತಾಂತರದ ನಂತರ ಯೋಜನೆ ಸುಸ್ಥಿತಿಯಲ್ಲಿ ಇಲ್ಲದಿದ್ದಕ್ಕೆ ತಾವು ಜವಾಬ್ದಾರರಲ್ಲವೆಂದು ತಿಳಿಸಿರುತ್ತಾರೆ. ನಿಯಮಗಳ ಪ್ರಕಾರ ಕಾರ್ಯಪಾಲಕ ಇಂಜಿನಿಯರ್‌ರವರು ಕಾಮಗಾರಿಯ ಅಂತಿಮ ಬಿಲ್ಲನ್ನು ಪಾವತಿಸುವ ಸಂದರ್ಭದಲ್ಲಿ ಶೇ 25% ರಷ್ಟು ಕಾಮಗಾರಿಗಳನ್ನು ತಪಾಸಣೆಲ್ಲಿ ಮಾಡಬೇಕಾಗಿದ್ದು, ಅದರಂತೆ ಕಾರ್ಯನಿರ್ವಹಿಸಿರುತ್ತೇನೆಂದು, ಕಾಮಗಾರಿ ಸ್ಥಳಕ್ಕೆ ಬೇಟಿ ಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುತ್ತೇನೆಂದು ವಿಚಾರಣಾಧಿಕಾರಿಗಳು ಈ ಯಾವುದೇ ಅಂಶವನ್ನು ಪರಿಗಣಿಸದೆ ಎಲ್ಲವೆ ಆರೋಪಿತರಿಗೂ ಒಂದೇ ರೀತಿಯ ದಂಡನೆ ವಿಧಿಸುವ ಬಗ್ಗೆ ಶಿಫಾರಸ್ಸು ಮಾಡಿರುವುದ್ ಸಮಂಜಸವಾಗಿರುವುದಿಲ್ಲವೆಂದು ತಿಳಿಸಿ, ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ತಮ್ಮನ್ನು ದೋಷಾಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ವಿವರಣೆಯಲ್ಲಿ 50 ಸಾವಿರ ಲೀಟರ್ ಸಾಮರ್ಥದ ಮೇಲ್ತೊಟ್ಟಿ ನಿರ್ಮಾಣ ಹಾಗೂ 2.30 ಕೀಲೋಮಿಟರ್ ರೈಸಿಂಗ್ ಮೈನ್ಸ್ ಅಳವಡಿಸಿ, ತುಂಗಭದ್ರ ನದಿಯಿಂದ ನೀರನ್ನು ಪಡೆದು ಗ್ರಾಮಕ್ಕೆ 300 ಮೀಟರ್

ಡಿಸ್ಟ್ರಿಬ್ಯೂಷನ್ ಪೈಪ್ ಲೈನ್ ಅಳವಡಿಸಿ, ನೀರು ಸರಬರಾಜು ಮಾಡಲಾಗುತ್ತಿದೆಯೆಂದು, ಮೂಲ ಅಂದಾಜಿನಲ್ಲಿ ತಿಳಿಸಿದಂತೆ ಕೊಳವೆ ಬಾವಿಗಳಲ್ಲಿ ಫ್ಲೋರೆಡ್ ಅಂಶಗಳು ಇದ್ದುದ್ದರಿಂದ ಕೊಳವೆ ಬಾವಿ ಕೊರೆಯುವುದನ್ನು ಸ್ಥಗಿತಗೊಳಿಸಿ, ಮಾನ್ಯ ಶಾಸಕರು, ಮತ್ತು ಗ್ರಾಮ ಪಂಚಾಯತ್ ಸದಸ್ಯರ ಕೋರಿಕೆಯಂತೆ ತುಂಗಭದ್ರಾ ನದಿಯಿಂದ ನೀರು ಪಡೆಯಲಾಗಿರುತ್ತದೆಯೆಂದು, ಕಾಮಗಾರಿಯನ್ನು ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸುವ ಸಂದರ್ಭದಲ್ಲಿ 5 ಸ್ಟಾಂಡ್ ಪೋಸ್ಟ್ ಇದ್ದು ನಂತರ ಅವುಗಳನ್ನು ಉಪಯೋಗಿಸದೆ ನಿರುಪಯುಕ್ತವಾಗಿರುತ್ತದೆಯೆಂದು ತಿಳಿಸಿ, ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ತಮ್ಮನ್ನು ದೋಷಾಮುಕ್ತಗೊಳಿಸುವಂತೆ ಕೋರಿರುತ್ತಾರೆ. ಮತ್ತೊಬ್ಬ ಆರೋಪಿತರಾದ ಶ್ರೀ ಜಹೀರುದ್ದಿನ ಸಲ್ಲಿಸಿರುವ ವಿವರಣೆಯಲ್ಲಿ ಮೇಲಿನ ಅಂಶಗಳನ್ನೇ ಉಚ್ಚರಿಸಿರುತ್ತಾರೆ.

ಸರ್ಕಾರವು ವಿಚಾರಣಾಧಿಕಾರಿಗಳು ಆರೋಪಗಳು ಸಾಬೀತಾಗಿರುತ್ತವೆ ಎಂಬ ನಿರ್ಣಯಕ್ಕೆ ಬರಲು ಕಾರಣವಾದ ಅಂಶಗಳು, ಆರೋಪಿತರ ವಿವರಣೆ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಪ್ರಶ್ನಿತ ಕಾಮಗಾರಿಗೆ ಸಂಬಂಧಿಸಿದಂತೆ ಮೂಲ ಅಂದಾಜು ಪಟ್ಟಿಯಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದು ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ಅದಕ್ಕೆ ಕೊಳವೆ ಬಾವಿ ನೀರನ್ನು ಸರಬರಾಜು ಮಾಡಿ, ನಂತರ 300 ಮೀಟರ್ ಡಿಸ್ಟ್ರಿಬ್ಯೂಷನ್ ಪೈಪ್ ಲೈನ್ ಹಾಗೂ 5 ಸ್ಟಾಂಡ್ ಪೋಸ್ಟ್‌ಗಳ ಮೂಲಕ ರಾಜೋಳ್ಳಿ ಗ್ರಾಮಕ್ಕೆ ನೀರು ಸರಬರಾಜು ಮಾಡಲು ರೂ.12.00 ಲಕ್ಷಕ್ಕೆ ಅಂದಾಜು ಅನುಮೋದನೆಯಾಗಿರುತ್ತದೆ. ಮೂಲ ಅಂದಾಜನ್ನು ಸ್ವಲ್ಪ ಮಟ್ಟಿಗೆ ಮಾರ್ಪಡಿಸಿ, ಎರಡು ಕೊಳವೆ ಬಾವಿಗಳನ್ನು ಕೊರೆಯುವುದರ ಬದಲಿಗೆ ರೈಸಿಂಗ್ ಮೈನ್ಸ್ ಅಳವಡಿಸಿ, ತುಂಗಾಭದ್ರ ನದಿಯಿಂದ ನೀರು ಪಡೆದು ಅದನ್ನು ಓವರ್ ಹೆಡ್ ಟ್ಯಾಂಕ್‌ಗೆ ಸರಬರಾಜು ಪಡೆದು ನಂತರ ಗ್ರಾಮಕ್ಕೆ 5 ಸ್ಟಾಂಡ್ ಪೋಸ್ಟ್‌ಗಳ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿಯನ್ನು ನಿರ್ವಹಿಸಿರುವುದು ಲಭ್ಯದಾಖಲೆಗಳಿಂದ ಕಂಡು ಬರುತ್ತದೆ.

ಅಪಾದಿತರು ತಮ್ಮ ವಿವರಣೆಯಲ್ಲಿಯೇ ತಿಳಿಸಿರುವಂತೆ ಮಂಜೂರಾದ ಅಂದಾಜಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸದಿರುವುದು ಸ್ಪಷ್ಟವಾಗಿರುತ್ತದೆ. ಮೂಲ ಅಂದಾಜನ್ನು ಕಾಮಗಾರಿಯ ಪ್ರಗತಿಯ ಅವಧಿಯಲ್ಲಿ ಅನಿವಾರ್ಯವಾಗಿ ಬದಲಾವಣೆ/ ಮಾರ್ಪಾಟು ಮಾಡಬೇಕಾದಲ್ಲಿ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಿ, ಅದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾಮಗಾರಿಯನ್ನು ಅದರಂತೆ ಮುಂದುವರಿಸಬೇಕಾಗಿದ್ದು ಆರೋಪಿತ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಅದರೆ ಪ್ರಸಕ್ತ ಪ್ರಕರಣದಲ್ಲಿ ಆರೋಪಿತರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿರುವುದಿಲ್ಲ. ಅವರುಗಳು ಸಲ್ಲಿಸಿರುವ ವಿವರಣೆಯಲ್ಲಿ ಲೋಕೋಪಯೋಗಿ ಇಲಾಖೆಯ ಸಂಹಿತೆಯ ಪ್ಯಾರ-191ನ್ನು ಉಲ್ಲೇಖಿಸಿರುವರು. ಸದರಿ ಕಂಡಿಕೆಯಲ್ಲಿನ ಅಂಶಗಳು ಸ್ಪಷ್ಟವಾಗಿ ಪ್ರಸಕ್ತ ಪ್ರಕರಣಕ್ಕೆ ತಾಳೆ ಹೊಂದದೆ ಇರುವುದರಿಂದ ಆರೋಪಿತರ ವಿವರಣೆಯು ಒಪ್ಪಲು ಅರ್ಹವಾಗಿರುವುದಿಲ್ಲ. ಮುಖ್ಯವಾಗಿ ಮಂಜೂರಾದ ಅಂದಾಜು ಪಟ್ಟಿಯನುಸಾರ 5 ಸ್ಟಾಂಡ್ ಪೋಸ್ಟ್‌ಗಳಿಗೆ ಬದಲಿಗೆ ಒಂದು ಸ್ಟಾಂಡ್‌ಪೋಸ್ಟ್‌ನ್ನು ಮಾತ್ರ ನಿರ್ಮಿಸಿರುವುದು, ನಿರ್ಮಿಸದೇ ಇದ್ದ ನಾಲ್ಕು ಸ್ಟಾಂಡ್ ಪೋಸ್ಟ್‌ಗಳಿಗೆ ರೂ. 60,264/- ಗಳನ್ನು ಪಾವತಿಸಿದ್ದು ಇದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಆರೋಪಿತ ಅಧಿಕಾರಿಗಳು ತಮ್ಮ ವಿವರಣೆಯೊಂದಿಗೆ 5 ಸ್ಟಾಂಡ್ ಪೋಸ್ಟ್‌ಗಳನ್ನು ನಿರ್ಮಿಸಿರುವ ಬಗ್ಗೆ ಛಾಯಾ ಚಿತ್ರಗಳನ್ನು ಹಾಗೂ ಅವುಗಳನ್ನು ಗ್ರಾಮ ಪಂಚಾಯತ್‌ಗೆ ಹಸ್ತಾಂತರ ಮಾಡಿರುವ ಬಗ್ಗೆ ದಾಖಲೆಯ ಪ್ರತಿಯನ್ನು ಲಗತ್ತಿಸಿ, ಸಲ್ಲಿಸಿರುತ್ತಾರೆ. ಕಾಮಗಾರಿಯ ತನಿಖಾ ಸಂದರ್ಭದಲ್ಲಿ 5 ಸ್ಟಾಂಡ್‌ಪೋಸ್ಟ್‌ಗಳನ್ನು ನಿರ್ಮಿಸಿರುವುದು ಕಂಡು ಬಂದಿರುವುದಿಲ್ಲ. ಒಂದು ವೇಳೆ ಸ್ಟಾಂಡ್‌ಪೋಸ್ಟ್‌ಗಳನ್ನು ನಿರ್ಮಿಸಿದ್ದಲ್ಲಿ ಅವುಗಳನ್ನು ತನಿಖಾಧಿಕಾರಿಗಳಿಗೆ ತೋರಿಸಬಹುದಾಗಿತ್ತು. ಹೀಗಾಗಿ ಅಪಾದಿತರು 5 ಸ್ಟಾಂಡ್‌ಪೋಸ್ಟ್‌ಗಳ ನಿರ್ಮಾನಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲೆಗಳು ಹಾಗೂ ವಿವರಣೆ

ಪರಿಗಣನೆಗೆ ಅರ್ಹವಾಗಿರುವುದಿಲ್ಲ. ಹೀಗಾಗಿ ಪ್ರಸಕ್ತ ಪ್ರಕರಣದಲ್ಲಿ ಸರ್ಕಾರಕ್ಕೆ ರೂ.60,264/- ಗಳ ಆರ್ಥಿಕ ನಷ್ಟ ಉಂಟಾಗಿರುವುದು ಸ್ಪಷ್ಟವಾಗಿರುತ್ತದೆ.

ಮೇಲೆ ವಿವರಿಸಿರುವ ಕಾರಣಗಳಿಂದಾಗಿ ವಿಚಾರಣಾಧಿಕಾರಿಗಳ ನಿರ್ಣಯವನ್ನು ತಳ್ಳಿ ಹಾಕಲು ಸೂಕ್ತ ಸಮಾಧಾನಕರ ಅಂಶಗಳು ಕಂಡುಬರುವುದಿಲ್ಲ. ಆದ್ದರಿಂದ, ಇಲಾಖಾ ವಿಚಾರಣೆಯಲ್ಲಿ ಅಪಾದಿತರ ವಿರುದ್ಧದ ಆರೋಪಗಳು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಆಪಾದಿತರ ಸಮಾನವಾಗಿ ವಸೂಲು ಮಾಡಲು ಹಾಗೂ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಅದರಂತೆ ಈ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 85 ಇಎನ್‌ಕ್ಯೂ 17, ಬೆಂಗಳೂರು ದಿನಾಂಕ:12.09.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಪ್ರಕರಣದಲ್ಲಿ ಬಾಗಿಯಾಗಿರುವ ಈ ಕೆಳಕಂಡ ಆಪಾದಿತರುಗಳ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರ ಹೆಸರಿನ ಮುಂದೆ ನಮೂದಿಸಿರುವಂತೆ ದಂಡನೆಯನ್ನು ವಿಧಿಸಿ, ಆದೇಶಿಸಿದೆ.

| ಕ್ರ.ಸಂ. | ಅಪಾದಿತರ ಹೆಸರು/ ಹುದ್ದೆ | ವಿಧಿಸಲಾದ ದಂಡನೆ |
|---|---|---|
| 1 | ಶ್ರೀ ಜಹೀರುದ್ದೀನ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾನ್ವಿ | 1. ಸರ್ಕಾರಕ್ಕೆ ಉಂಟಾಗಿರುವ ಒಟ್ಟು ಆರ್ಥಿಕ ನಷ್ಟ ರೂ.60,264/- ಗಳ ಪೈಕಿ ರೂ.20,088/- ಗಳನ್ನು (ಇಪ್ಪತ್ತು ಸಾವಿರದ ಎಂಭತ್ತೆಂಟು ಮಾತ್ರ) ಗಳನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iv) ರನ್ವಯ ಅವರ ವೇತನದಿಂದ ವಸೂಲು ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iii) ರನ್ವಯ ಖಾಲಿಕ ವೇತನ ಶ್ರೇಣಿಯಲ್ಲಿ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವುದು. |
| 2 | ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಾನ್ವಿ | 1. ಸರ್ಕಾರಕ್ಕೆ ಉಂಟಾಗಿರುವ ಒಟ್ಟು ಆರ್ಥಿಕ ನಷ್ಟ ರೂ.60,264/- ಗಳ ಪೈಕಿ ರೂ.20,088/- ಗಳನ್ನು (ಇಪ್ಪತ್ತು ಸಾವಿರದ ಎಂಭತ್ತೆಂಟು ಮಾತ್ರ) ಗಳನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iv) ರನ್ವಯ ಅವರ ವೇತನದಿಂದ ವಸೂಲು ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iii) ರನ್ವಯ ಖಾಲಿಕ ವೇತನ ಶ್ರೇಣಿಯಲ್ಲಿ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವುದು. |

| | | |
|---|---|---|
| 3 | ಶ್ರೀ. . ಕೆ. ಶಂಕರ್, ಹಿಂದಿನ ಪ್ರಭಾರ ಕಾರ್ಯಪಾಲಕ ಇಂಜನಿಯರ್, ಪಂ.ರಾ.ಇಂ ವಿಭಾಗ, ರಾಯಚೂರು, | 1. ಸರ್ಕಾರಕ್ಕೆ ಉಂಟಾಗಿರುವ ಒಟ್ಟು ಆರ್ಥಿಕ ನಷ್ಟ ರೂ.60,264/- ಗಳ ಪೈಕಿ ರೂ.20,088/- ಗಳನ್ನು (ಇಪ್ಪತ್ತು ಸಾವಿರದ ಎಂಭತ್ತೆಂಟು ಮಾತ್ರ) ಗಳನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iv) ರನ್ವಯ ಅವರ ವೇತನದಿಂದ ವಸೂಲು ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 8 (iii) ರನ್ವಯ ಖಾಲಿಕ ವೇತನ ಶ್ರೇಣಿಯಲ್ಲಿ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವುದು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

12/09/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಉಪಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
9. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರ ಮುಖಾಂತರ)
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ / ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
12. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.